Compt/Uplok/MYS/1393/2019/ARE-20

## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/1393/2019/ಎಆರ್ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 28/03/2022.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ***

ವಿಷಯ: 1) ಶ್ರೀಮತಿ ಸಾವಿತ್ರಮ್ಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಮ ಪಂಚಾಯಿತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ 2) ಶ್ರೀ ದೇವರಾಜೇಗೌಡ, ಅಧ್ಯಕ್ಷರು, ಕಟ್ಟೇರಿ ಗ್ರಾಮ ಪಂಚಾಯಿತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು 3) ಶ್ರೀ ಪಿ.ಸಿ. ಕುಮಾರ್, ಹಿಂದಿನ ಪಿ.ಡಿ.ಓ., ಕಟ್ಟೇರಿ ಗ್ರಾಮ ಪಂಚಾಯಿತಿ ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಮ್ಮನಹಳ್ಳಿ ಗ್ರಾಮ ಪಂಚಾಯಿತಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರುಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು.

****

ಶ್ರೀ. ರಾಜು ಬಿನ್ ಲೇಟ್ ಕೆ.ಪಿ. ತಿಮ್ಮೇಗೌಡ, ಹೊಸ ಕನ್ನಂಬಾಡಿ ಗ್ರಾಮ ಬಸ್ ನಿಲ್ದಾಣದ ಹತ್ತಿರ, ಬನ್ನಂಗಾಡಿ ಅಂಚೆ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ 1) ಶ್ರೀಮತಿ ಸಾವಿತ್ರಮ್ಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಮ ಪಂಚಾಯಿತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ 2) ಶ್ರೀ ದೇವರಾಜೇಗೌಡ, ಅಧ್ಯಕ್ಷರು, ಕಟ್ಟೇರಿ ಗ್ರಾಮ ಪಂಚಾಯಿತಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು 3) ಶ್ರೀ ಪಿ.ಸಿ. ಕುಮಾರ್, ಹಿಂದಿನ ಪಿ.ಡಿ.ಓ., ಕಟ್ಟೇರಿ ಗ್ರಾಮ ಪಂಚಾಯಿತಿ ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಮ್ಮನಹಳ್ಳಿ ಗ್ರಾಮ ಪಂಚಾಯಿತಿ

ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ "ಎದುರುದಾರರ-1, 2 ಮತ್ತು 3" ಎಂದು ಅನುಕ್ರಮವಾಗಿ ಕರೆಯಲ್ಪಡುತ್ತಾರೆ), ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತನ್ನ ದೂರಿನಲ್ಲಿ ಮಂಡ್ಯ ಜಿಲ್ಲೆಯ, ಪಾಂಡವಪುರ ತಾಲ್ಲೂಕಿನ ಕಟ್ಟೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸ ಕನ್ನಂಬಾಡಿ ಗ್ರಾಮದಲ್ಲಿ ಖಾತಾ ನಂಬರ್ 18/2 ರಲ್ಲಿ ತನ್ನ ಶೀಟ್ ಮನೆ ಇದ್ದು, ಸದರಿ ಮನೆಯ ದಕ್ಷಿಣ ಭಾಗಕ್ಕೆ 25-30 ಅಡಿ ಅಗಲದ ರಸ್ತೆಯಿದ್ದು ಸದರಿ ರಸ್ತೆಯನ್ನು ತಾನು ಉಪಯೋಗಿಸುತ್ತಿದ್ದು, ಆದರೆ ದಿನಾಂಕ: 08-04-2017 ರಂದು ಶ್ರೀ. ಕೆ.ಟಿ. ರವಿಕುಮಾರ್ ಇವರು ಸದರಿ ರಸ್ತೆಯನ್ನು ಅತಿಕ್ರಮಿಸಿಕೊಂಡು ಶೀಟ್ ಮನೆ ನಿರ್ಮಾಣ ಮಾಡಲು ಮುಂದಾದಾಗ ಅದನ್ನು ತಾನು ತಡೆಗಟ್ಟಿದ್ದೆ, ನಂತರ ಎದುರುದಾರರಿಗೆ ಸಾರ್ವಜನಿಕ ರಸ್ತೆಯನ್ನು ಶ್ರೀ. ಕೆ.ಟಿ.ರವಿಕುಮಾರ್ ಇವರ ಹೆಸರಿಗೆ ಖಾತೆ ಮಾಡಬಾರದೆಂದು ತಿಳಿಸಿ ಅರ್ಜಿ ಸಲ್ಲಿಸಿದ್ದರೂ ಸಹ ಎದುರುದಾರರ ಕಾನೂನುಬಾಹಿರವಾಗಿ ಸದರಿ ರಸ್ತೆಯ ಜಾಗಕ್ಕೆ ಸದರಿ ಶ್ರಿ. ಕೆ.ಟಿ.ರವಿಕುಮಾರ್‌ರವರ ಹೆಸರಿಗೆ ಖಾತೆ ಮಾಡಿಕೊಟ್ಟಿರುವುದರಿಂದ ಎದುರುದರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. 1ನೇ ಎದುರುದಾರರು ಸಲ್ಲಿಸಿರುವ ತನ್ನ ಆಕ್ಷೇಪಣೆಯಲ್ಲಿ ದೂರಿನ ಆರೋಪಣೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಶ್ರೀ. ರವಿಕುಮಾರ್‌ರವರ ಹೆಸರಿಗೆ ಖಾತೆ ಸಂಖ್ಯೆ:18 ಕ್ಕೆ ಹಾಗೂ ಸ್ವತ್ತಿನ ಸಂಖ್ಯೆ 152100601900300142ರ ಇ-ಸ್ವತ್ತು ನಮೂನೆ 9 ಮತ್ತು 11ಎ ನೀಡಿರುವ ವಿಷಯಕ್ಕೆ

ಸಂಬಂಧಿಸಿದಂತೆ ತಾನು ಕಟ್ಟೇರಿ ಗ್ರಾಮ ಪಂಚಾಯಿತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲೇ ದಿ. 27/04/2017 ರಂದು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ. ದೇವರಾಜಗೌಡರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮ ಪಂಚಾಯತಿಯ ಸಭೆಯ ನಿರ್ಣಯ ಸಂ:9 ರ ಪ್ರಕಾರ ಸದರಿ ಶ್ರೀ ರವಿಕುಮಾರ್ ಇವರ ಅರ್ಜಿಗೆ ಸಂಬಂಧಿಸಿದಂತೆ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಸದರಿ ಶ್ರೀ. ರವಿಕುಮಾರ್‌ರವರ ಖಾತೆ ವಿಚಾರವಾಗಿ ಹಿಂದಿನ ಪಿ.ಡಿ.ಓ ರವರು ಸ್ಥಳ ಪರಿಶೀಲಿಸಿ ಅವರ ಲಾಗಿನ್‌ನಿಂದ ಇ-ಸ್ವತ್ತು ತಂತ್ರಾಂಶದಲ್ಲಿ ಮೋಜಣಿಗೆ ಕಳುಹಿಸಿರುವ ದೃಢೀಕೃತ ಪ್ರತಿಗಳಲ್ಲಿಯೂ ಖಾತಾ ನಂಬರ್ 18ರಲ್ಲಿ ಪೂರ್ವ-ಪಶ್ಚಿಮ 41 ಅಡಿಗಳು ಮತ್ತು ಉತ್ತರ-ದಕ್ಷಿಣ 40 ಅಡಿಗಳಿಗೆ ಅಳತೆಗನುಗುಣವಾಗಿ ಮೋಜಣಿಗೆ ಕಳುಹಿಸಿರುತ್ತಾರೆ.

4. ಮುಂದುವರೆದು 1ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ ಗ್ರಾಮ ಪಂಚಾಯತ್ ಸಭಾ ನಡವಳಿಯಂತೆ ಹಿಂದಿನ ಪಿ.ಡಿ.ಓ. ರವರು ಇ-ಸ್ವತ್ತು ತಂತ್ರಾಂಶದಲ್ಲಿ ಮೋಜಣಿಗೆ ಕಳುಹಿಸಿರುವ ದೃಢೀಕೃತ ಪ್ರತಿಗಳ ಆಧಾರದ ಮೇಲೆ ತಾನು ಸದರಿ ಶ್ರೀ. ರವಿಕುಮಾರ್‌ರವರಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ನಮೂನೆ 9 ಮತ್ತು 11ಎ ದಾಖಲೆಗಳನ್ನು ನೀಡಿರುತ್ತೇನೆ ಎಂದು ತಿಳಿಸಿ ದೂರಿನಲ್ಲಿ ಆರೋಪಿಸಿರುವಂತೆ ತಾನು ಯಾವುದೇ ಅಕ್ರಮಗಳನ್ನು ಎಸಗಿರುವುದಿಲ್ಲ ಎಂದು ತಿಳಿಸಿ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ ಮತ್ತು ಇವರು ತನ್ನ ಆಕ್ಷೇಪಣೆಯೊಂದಿಗೆ ದಿ. 27/04/2017ರ ಗ್ರಾಮ ಪಂಚಾಯಿತಿಯ ಸಭಾ ನಡವಳಿ ಪ್ರತಿ ಮತ್ತು ಖಾತೆ ಸಂ:18 ರ ಸ್ಕೆಚ್ ಹಾಗೂ ಫಾರಂ ನಂ. 9 ಮತ್ತು 11ಎ ಗಳನ್ನು ಹಾಜರುಮಾಡಿರುತ್ತಾರೆ.

5. ದೂರುದಾರರು ಸಲ್ಲಿಸಿರುವ ದಿನಾಂಕ: 14-9-2019 ರ ಪ್ರತ್ಯುತ್ತರದಲ್ಲಿ ಗ್ರಾಮ ಪಂಚಾಯತಿಯವರು ಅಕ್ಕ-ಪಕ್ಕದ ಮನೆಯವರಿಗೆ ಯಾವುದೇ ನೋಟಿಸ್ ನೀಡದ ಸ್ಥಳ

ತನಿಖೆ ಮಾಡದೆ ಶ್ರೀ. ರವಿಕುಮಾರ್‌ರವರ ಹೆಸರಿಗೆ ಖಾತಾ ಮಾಡಿರುವುದಾಗಿ ಆರೋಪಿಸಿರುತ್ತಾರೆ.

6. ಆದುದರಿಂದ ಮೇಲೆ ತಿಳಿಸಲಾದ ಸಮಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದ ಶ್ರೀ ದೇವರಾಜೇಗೌಡ ಇವರನ್ನು 2ನೇ ಎದುರುದಾರರನ್ನಾಗಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಪಿ.ಸಿ. ಕುಮಾರ ಇವರನ್ನು 3ನೇ ಎದುರುದಾರರನ್ನಾಗಿ ಸೇರಿಸಿ ಅವರ ಆಕ್ಷೇಪಣೆಯನ್ನು ಕರೆಯಲಾಗಿತ್ತು.

7. ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದ 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ದಿ: 27-4-2017 ರಂದು ನಡೆದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಶ್ರೀ ರವಿಕುಮಾರ್ ಇವರ ಖಾತೆ ಅರ್ಜಿ ವಿಚಾರವಾಗಿ ಯಾವುದೇ ತಂಟೆ ತಕರಾರು ಇಲ್ಲದಿದ್ದುದ್ದರಿಂದ ಸದರಿ ಅರ್ಜಿ ವಿಚಾರವಾಗಿ ಚರ್ಚಿಸಿ ನಿರ್ಣಯ ಸಂ:5/9 ಅನ್ನು ಅಂಗೀಕರಿಸಿರುತ್ತೇನೆ ಎಂದು ತಿಳಿಸಿ ಸದರಿ ನಿರ್ಣಯದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

8. ಮೇಲೆ ತಿಳಿಸಲಾದ ಸಮಯದಲ್ಲಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದ 3ನೇ ಎದುರುದಾರರು ದಿನಾಂಕ: 5-2-2021 ರ ಆಕ್ಷೇಪಣೆಯಲ್ಲಿ ಶ್ರೀ ರವಿಕುಮಾರ್ ಬಿನ್ ಕೆ.ಪಿ. ತಿಮ್ಮೇಗೌಡ ಇವರು ತಮ್ಮ ಆಸ್ತಿಯ ನಮೂನೆ-9 ಮತ್ತು 11 ಕೋರಿ ಅರ್ಜಿ ಸಲ್ಲಿಸಿದ್ದರ ಮೇರೆಗೆ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಅರ್ಜಿಯನ್ನು ಮಂಡಿಸಿ ದಾಖಲಾತಿ ಮತ್ತು ಸ್ಥಳ ಪರಿಶೀಲಿಸಲು ಮೋಜಣಿಯವರಿಗೆ ಸ್ಥಳದ ಅಳತೆ ಮತ್ತು ನಿಖರತೆಗಾಗಿ ತಾನು ಸಲ್ಲಿಸಿದ್ದೆ ಮತ್ತು ಅದನ್ನು ಹೊರತುಪಡಿಸಿದರೇ ಆಸ್ತಿ ಖಾತೆಯನ್ನು ತನ್ನ ಕರ್ತವ್ಯದ ಅವಧಿಯಲ್ಲಿ ಅನುಮೋದಿಸಿರಲಿಲ್ಲ ಮತ್ತು ನಮೂನೆ-9 ಮತ್ತು 11 ರ ಆಸ್ತಿ ದಾಖಲೆ ತನ್ನ ಅವಧಿಯಲ್ಲಿ ಆಗಿರುವುದಿಲ್ಲ ಮತ್ತು ನಮೂನೆ-9 ಮತ್ತು 11 ಗಳನ್ನು ಅನುಮೋದಿಸಿ

ವಿತರಿಸುವ ಮೊದಲು ಸದರಿ ಆಸ್ತಿಯ ತಕರಾರಿನ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು ಅಥವಾ ತಿರಸ್ಕಸುವುದು ಪಿ.ಡಿ.ಓ. ರವರ ಕರ್ತವ್ಯ ಆಗಿತ್ತು. ಶ್ರೀ ರವಿಕುಮಾರ್ ಇವರ ಹೆಸರಿಗೆ ನಮೂನೆ-9 ಮತ್ತು 10 ನ್ನು ದಿ:9-11-2018 ರಂದು ಆಗಿನ ಪಿ.ಡಿ.ಓ. ಆಗಿದ್ದ 1ನೇ ಎದುರುದಾರರು ಅನುಮೋದಿಸಿ ವಿತರಿಸಿರುವುದರಿಂದ ಇದರಲ್ಲಿ ತನ್ನ ಕರ್ತವ್ಯ ನಿರ್ಲಕ್ಷತನ ಇರುವುದಿಲ್ಲ ಎಂದು ತಿಳಿಸಿ ದೂರನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ.

9. ಈ ಪ್ರಕರಣದಲ್ಲಿ ಹಾಜರು ಮಾಡಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಶ್ರೀ ರವಿಕುಮಾರ ಇವರು ದಿ. 15-4-2017 ರಂದು ಕಟ್ವೇರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿ ಎಂ.ಆರ್.ನಂ.20/2009-10ರ ಸ್ವತ್ತಿನ ಮುಂಭಾಗದಲ್ಲಿರುವ ಜಾಗವನ್ನು ಖಾತೆಗೆ ಸೇರ್ಪಡೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯಲ್ಲಿ ಸೇರ್ಪಡೆ ಮಾಡಿಕೊಡುವಂತೆ ಕೋರಿದ ಸ್ವತ್ತಿನ ಅಳತೆಯನ್ನು ಪೂರ್ವ-ಪಶ್ಚಿಮ 41 ಅಡಿಗಳು ಮತ್ತು ಉತ್ತರ-ದಕ್ಷಿಣ 45 ಅಡಿಗಳು ಎಂದು ನಮೂದು ಮಾಡಿದ್ದರು. **ಆದರೆ ಸದರಿ ಆಸ್ತಿಯು ಶ್ರೀ. ರವಿಕುಮಾರ್‌ರವರಿಗೆ ಅಧಿಕೃತವಾಗಿ ಮಂಜೂರಾದ ಬಗ್ಗೆ ಯಾವುದೇ ದಾಖಲೆಯು ಇರುವುದಿಲ್ಲ.** ಶ್ರೀ. ರವಿಕುಮಾರ್‌ರವರ ಹೆಸರಿಗೆ ಖಾತೆ ಮಾಡಿಕೊಡಬಾರದೆಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ದೂರುದಾರರು ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ. ಹೀಗಿದ್ದರೂ ಸಹ ದಿನಾಂಕ: 27/04/2017ರ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ವಿಷಯ ಸಂ:5 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ನಿರ್ಣಯಿಸಲಾಗಿದೆ;

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| I | ------------ | ------------ |
| II | ------------ | ------------ |
| III | ------------ | ------------ |
| IV | ------------ | ------------ |

| | | |
|---|---|---|
| v | ಸಾರ್ವಜನಿಕರಿಂದ ಖಾತೆ ಮತ್ತು ಲೈಸನ್ಸ್ ಅರ್ಜಿಗಳ ಬಗ್ಗೆ | ಈ ವಿಚಾರವಾಗಿ ಸಾರ್ವಜನಿಕರಿಂದ ಖಾತೆ ಮತ್ತು ಲೈಸನ್ಸ್ ನಮೂನೆ 9 – 11 ಕೋರಿ ಬಂದಿರುವ ಅರ್ಜಿಗಳನ್ನು ಸಭೆಗೆ ಓದಿ ತಿಳಿಸಲಾಯಿತು. ಚರ್ಚಿಸಿದ ಸಭೆಯು ಸದರಿ ಅರ್ಜಿಗಳು ಸ್ಥಳ ದಾಖಲಾತಿ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

10. ಮೇಲೆ ತೋರಿಸಲಾದಂತೆ ಗ್ರಾಮ ಪಂಚಾಯತಿಯ ಸಭೆಯಲ್ಲಿ ನಿರ್ಣಯಿಸಿದ ನಂತರ ಶ್ರೀ ರವಿಕುಮಾರ್ ಇವರು ಗ್ರಾಮ ಪಂಚಾಯತಿಗೆ ಸಲ್ಲಿಸಿದ್ದ ದಿನಾಂಕ: 15-4-2017 ರ ಅರ್ಜಿಯಲ್ಲಿ ತಿಳಿಸಿದ ಎಂಆರ್ ನಂ:20/2009-10 ರ ಸ್ವತ್ತಿನ ಮುಂಭಾಗದಲ್ಲಿರುವ 41*45 ಅಡಿಗಳ ಸ್ವತ್ತಿನ ಖಾತೆಯನ್ನು ಸದರಿ ಶ್ರೀ ರವಿಕುಮಾರ್ ಇವರ ಹೆಸರಿಗೆ ನಮೂನೆ-9 ಮತ್ತು 11ಎ ನೀಡುವ ಮೂಲಕ ಕೊಡಲಾಗಿರುತ್ತದೆ.

11. ಸದರಿ ಶ್ರೀ ರವಿಕುಮಾರ್ ಇವರ ಹೆಸರಿಗೆ ಖಾತೆ ಮಾಡಿಕೊಡಬಾರದು ಎಂದು ದೂರುದಾರರು ಮೊದಲೇ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸದೆ ಮತ್ತು ಶ್ರೀ. ರವಿಕುಮಾರ್‌ರವರ ಹೆಸರಿಗೆ ಸದರಿ ಆಸ್ತಿಯು ಮಂಜೂರಾದ ಬಗ್ಗೆ ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ತಮ್ಮ ಲಾಗಿನ್‌ನಿಂದ ಇ-ಸ್ವತ್ತು ತಂತ್ರಾಂಶದಲ್ಲಿ ಮೋಜಣಿಗೆ ಕಳುಹಿಸಿರುವ ದೃಢೀಕೃತ ಪ್ರತಿಗಳಲ್ಲಿಯೂ ಖಾತಾ ನಂ. 18ರಲ್ಲಿ ಪೂರ್ವ-ಪಶ್ಚಿಮ 41ಅಡಿಗಳು ಮತ್ತು ಉತ್ತರ-ದಕ್ಷಿಣ 40 ಅಡಿಗಳು ಅಳತೆಗನುಗುಣವಾಗಿ ಮೋಜಣಿಗೆ ಕಳುಹಿಸಿರುತ್ತಾರೆ ಎಂದು 1ನೇ ಎದರುದಾರರು ಅವರ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತಿಯ ದಿ: 27-4-2017 ರ ನಿರ್ಣಯದ ಪ್ರಕಾರ ತಾನು ದಾಖಲಾತಿ ಮತ್ತು ಸ್ಥಳ ಪರಿಶೀಲಿಸಲು ಮೋಜಣೆಯವರಿಗೆ ಸ್ಥಳದ ಅಳತೆ ಮತ್ತು ನಿಖರತೆಗಾಗಿ ಸಲ್ಲಿಸಿದ್ದೆ ಎಂದು 3ನೇ ಎದುರುದಾರರು ತಿಳಿಸಿರುತ್ತಾರೆ. ಸದರಿ ಶ್ರೀ ರವಿಕುಮಾರ್ ಇವರು ದಿನಾಂಕ: 15-4-2017

ರಂದು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿ ಎಂ.ಆರ್.ನಂ:20/2009-10 ರ ಮುಂದಿನ 41*45 ಅಡಿ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ದಾಖಲಿಸುವಂತೆ ಕೋರಲಾದ ಸ್ವತ್ತು ಸದರಿ ಶ್ರೀ ರವಿಕುಮಾರ್ ಇವರಿಗೆ ಯಾರಿಂದ ಮತ್ತು ಯಾವ ನೋಂದಣಿ ದಾಖಲಾತಿಯ ಪ್ರಕಾರ ಅಥವಾ ಸರ್ಕಾರದ ಮಂಜೂರಾತಿ ಆದೇಶದ ಪ್ರಕಾರ ಬಂದಿರುತ್ತದೆ ಎಂದು ಪ್ರಾರಂಭಿಕ ಹಂತದಿಂದ ಖಾತೆ ದಾಖಲಿಸಿ ನಮೂನೆ-9 ಮತ್ತು 11ಎ ಗಳನ್ನು ಸದರಿ ಶ್ರೀ ರವಿಕುಮಾರ್ ಇವರ ಹೆಸರಿಗೆ ನೀಡುವ ತನಕದ ಹಂತದವರೆಗೆ ಪರಿಶೀಲಿಸುವ ಜವಾಬ್ದಾರಿ/ ಹೊಣೆಗಾರಿಕೆ/ ಕರ್ತವ್ಯ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಎದುರುದಾರ ಸಂ:1 ಮತ್ತು 3 ರವರದ್ದಾಗಿತ್ತು. ಸದರಿ ಶ್ರೀ ರವಿಕುಮಾರ್ ಇವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ: 27-4-2017 ರ ಗ್ರಾಮ ಪಂಚಾಯತಿಯ ನಿರ್ಣಯದಲ್ಲಿ ಅರ್ಜಿಗಳ ಸ್ಥಳ ದಾಖಲಾತಿ ಪರಿಶೀಲಿಸಿ ನಿಯಮಗಳನುಸಾರ ಕ್ರಮ ಜರುಗಿಸುವಂತೆ ನಿರ್ಣಯಿಸಲಾಗಿದೆ. ಸದರಿ ಸ್ವತ್ತು ಯಾವ ರೀತಿ ಮತ್ತು ಯಾವ ದಾಖಲೆಯ ಆಧಾರದಲ್ಲಿ ತನಗೆ ಬಂದಿದೆ ಎಂದು ಶ್ರೀ ರವಿಕುಮಾರ್ ಇವರು ತಿಳಿಸದೇ ಇರುವುದರಿಂದ ಮತ್ತು ಅವರು ಸಲ್ಲಿಸಿದ್ದ ದಿನಾಂಕ: 15-4-2017 ರ ಅರ್ಜಿಯೊಂದಿಗೆ ಸದರಿ ಅರ್ಜಿಯಲ್ಲಿ ತಿಳಿಸಿದ್ದ 41*45 ಅಡಿಗಳ ಸ್ವತ್ತಿನ ಹಕ್ಕು ದಾಖಲೆಗಳನ್ನು ಅವರು ಹಾಜರಿಸದೇ ಇದ್ದುದ್ದರಿಂದ ಗ್ರಾಮ ಪಂಚಾಯತಿಯ ದಿ: 27-4-2017 ನಿರ್ಣಯ ಸಂ:5 ರ ಪ್ರಕಾರ ಗ್ರಾಮ ಪಂಚಾಯತಿಯ ಪಿ.ಡಿ.ಓ. ಆಗಿದ್ದ 3ನೇ ಎದುರುದಾರರು ಅವರ ಲಾಗಿನ್‌ನಿಂದ ಇ-ಸ್ವತ್ತು ತಂತ್ರಾಂಶದಲ್ಲಿ ಮೋಜಣಿಗೆ ಕಳುಹಿಸಿ ಮತ್ತು ಮೋಜಣಿಗೆ ಕಳುಹಿಸುವಾಗ ಸ್ವತ್ತನ್ನು ಖಾತೆ ಸಂ:18 ಪೂರ್ವ-ಪಶ್ಚಿಮ:41 ಅಡಿಗಳು ಮತ್ತು ಉತ್ತರ-ದಕ್ಷಿಣ:40 ಅಡಿಗಳು ಎಂದು ನಮೂದಿಸಿ 3ನೇ ಎದುರುದಾರರು ಕರ್ತವ್ಯ ನಿರ್ಲಕ್ಷತನ ಎಸಗಿರುವುದು ಕಂಡುಬರುತ್ತದೆ.

12. ಅದೇ ಪ್ರಕಾರ, ಮೇಲೆ ತಿಳಿಸಲಾದಂತೆ ಖಾತೆ ಸಂ:18 ರ ಪೂರ್ವ-ಪಶ್ಚಿಮ:41 ಅಡಿಗಳು ಮತ್ತು ಉತ್ತರ-ದಕ್ಷಿಣ:40 ಅಡಿಗಳು ಇ-ಸ್ವತ್ತು ಖಾತೆ ದಾಖಲಿಸಿ ನಮೂನೆ-9 ಮತ್ತು

11ಎ ಗಳನ್ನು ಸದರಿ ಶ್ರೀ ರವಿಕುಮಾರ್ ಇವರಿಗೆ ನೀಡುವ ಮೊದಲು ಸದರಿ ಸ್ವತ್ತು ಶ್ರೀ ರವಿಕುಮಾರ್ ಇವರಿಗೆ ಯಾರಿಂದ ಮತ್ತು ಯಾವಾಗ ಹಾಗೂ ಯಾವ ದಾಖಲೆಗಳಿಂದ ಬಂದಿದೆ ಎಂದು ಕೂಲಂಕುಷವಾಗಿ ಪರಿಶೀಲಿಸುವ ಕರ್ತವ್ಯವು ಆ ಸಮಯದಲ್ಲಿ ಗ್ರಾಮ ಪಂಚಾಯತಿಯ ಪಿ.ಡಿ.ಓ. ಆಗಿದ್ದ 1ನೇ ಎದುರುದಾರರದ್ದಾಗಿತ್ತು. 1ನೇ ಎದುರುದಾರರು ಆ ರೀತಿ ಕೂಲಂಕುಷವಾಗಿ ಪರಿಶೀಲಿಸದೇ ಸದರಿ ಸ್ವತ್ತಿಗೆ ಸದರಿ ಶ್ರೀ ರವಿಕುಮಾರ್ ಇವರಿಗೆ ನಮೂನೆ-9 ಮತ್ತು 11ಎ ಗಳನ್ನು ನೀಡಿ ಸಂಪೂರ್ಣ ಕರ್ತವ್ಯ ನಿರ್ಲಕ್ಷತನ ಎಸಗಿರುವುದು ಕಂಡುಬರುತ್ತದೆ.

13. **ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 346/ಗ್ರಾಪಂಅ 2013ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ** ಪ್ರಕರಣದ 22ರಲ್ಲಿ ಸಾರ್ವಜನಿಕ ಬೀದಿಗಳು ಮತ್ತು ಖಾಲಿ ನಿವೇಶನಗಳ ಮೇಲಿನ ಅಡೆತಡೆ ಮತ್ತು ಒತ್ತುವರಿಗಳನ್ನು ನಿರ್ಬಂಧಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಗ್ರಾಮ ಪಂಚಾಯಿತಿಯು ಅಂತಹ ಅಡೆತಡೆ ಮತ್ತು ಒತ್ತುವರಿಗಳನ್ನು ತೆಗೆದುಹಾಕುವ ಅಧಿಕಾರವನ್ನು ಹೊಂದಿದ್ದು, ಮತ್ತು ಖಾಸಗಿ ಸ್ವತ್ತಾಗಿಲ್ಲದ ಯಾವುದೇ ತರದ ನಿವೇಶನದಲ್ಲಿ, ಅಂತಹ ನಿವೇಶನವು ಗ್ರಾಮ ಪಂಚಾಯಿತಿಯಲ್ಲಿ **ನಿಹಿತವಾಗಿರಲಿ** ಅಥವಾ **ಇಲ್ಲದಿರಲಿ,** ಅದೇ ಸ್ವರೂಪದ ಯಾವುದೇ ಅನಧಿಕೃತದ ಅಡೆತಡೆ ಅಥವಾ ಒತ್ತುವರಿಯನ್ನು ತೆಗೆದುಹಾಕಲು ಅಂತಹದ್ದೇ ಅಧಿಕಾರವನ್ನು ಹೊಂದಿರುವುದರಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆಸ್ತಿಯ ಒತ್ತುವರಿಗಳನ್ನು ತೆರವುಗೊಳಿಸುವ ಬಗ್ಗೆ ತಿಳಿಸಲಾಗಿರುತ್ತದೆ.

14. ಸದರಿ ಸುತ್ತೋಲೆಯಲ್ಲಿ ಮುಂದುವರೆದು, ಗ್ರಾಮ ಪಂಚಾಯಿತಿ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುವ ಮತ್ತು ಅಕ್ರಮವಾಗಿ ಗ್ರಾಮ ಠಾಣಾ ಹಾಗೂ ಕಂದಾಯ ಭೂಮಿಯಲ್ಲಿನ ನಿವೇಶನ ಹಾಗೂ ಕಟ್ಟಡಗಳಿಗೆ ಸಮ್ಮತಿಸುವಂತೆ **ಗ್ರಾಮ ಪಂಚಾಯಿತಿಗಳು ನಮೂನೆ 9ನ್ನು ಕಡ್ಡಾಯವಾಗಿ ನೀಡತಕ್ಕದ್ದಲ್ಲ.** ಸದರಿ ಆಸ್ತಿಗಳಿಗೆ

ಸಂಬಂಧಿಸಿದಂತೆ ಕಟ್ಟಡ ನಿರ್ಮಾಣ ಲೈಸೆನ್ಸ್ ಮತ್ತು ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ನೀಡತಕ್ಕದ್ದಲ್ಲ ಎಂದು ತಿಳಿಸಿರುತ್ತದೆ.

15. ಅದೇ ರೀತಿ ಕರ್ನಾಟಕ ಸರ್ಕಾರದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯಿಂದ ಚರಾ ಹಾಗು ಸ್ಥಿರ ಸ್ವತ್ತುಗಳ ಅರ್ಜನೆ ಮತ್ತು ವರ್ಗಾವಣೆ ನಿಯಮಗಳು 1996ರ ನಿಯಮ 5ರ ಪ್ರಕಾರ ಈ ಕೆಳಕಂಡಂತೆ ನಿಯಮವಿರುತ್ತದೆ:

> **"ಸ್ಥಿರ ಸ್ವತ್ತಿನ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆ-** ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಸ್ಥಿರ ಸ್ವತ್ತಿನ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು ಅಂಥ ವರ್ಗಾವಣೆಗಾಗಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ಸಿಂಧುವಾಗತಕ್ಕದಲ್ಲ."

16. ಆದರೆ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 1 ಮತ್ತು 3ನೇ ಎದುರುದಾರರು ಈ ಪ್ರಕರಣದಲ್ಲಿ ಹೇಳಿರುವ ಸದರಿ ಆಸ್ತಿಯು ಶ್ರೀ. ರವಿಕುಮಾರ್‌ರವರಿಗೆ ಯಾವ ಮೂಲದಿಂದ ಬಂದಿರುತ್ತದೆ ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಕೇವಲ ದಿ: 27-4-2017 ರಂದು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ವಿಷಯ ಸಂ:5 ರ ಮೇಲೆ **"ಈ ವಿಚಾರವಾಗಿ ಸಾರ್ವಜನಿಕರಿಂದ ಖಾತೆ ಮತ್ತು ಲೈಸನ್ಸ್ ನಮೂನೆ 9 ಮತ್ತು 11 ಕೋರಿ ಬಂದಿರುವ ಅರ್ಜಿಗಳನ್ನು ಸಭೆಗೆ ಓದಿ ತಿಳಿಸಲಾಯಿತು. ಚರ್ಚಿಸಿದ ಸಭೆಯು ಸದರಿ ಅರ್ಜಿಗಳು ಸ್ಥಳ ದಾಖಲಾತಿ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು."** ಎಂದು ಮಾಡಿರುವ ನಿರ್ಣಯದ ಮೇರೆಗೆ ಎದುರುದಾರ ಸಂ:1 ಮತ್ತು 3 ರವರು ಸದರಿ ಶ್ರೀ ರವಿಕುಮಾರ್ ಇವರ ಹೆಸರಿಗೆ ಮೋಜಣಿ ಮಾಡಿಸಿ, ಖಾತೆ ದಾಖಲಿಸಿ ನಮೂನೆ-9 ಮತ್ತು 11ಎ ನೀಡುವ ಹಂತದ ಪ್ರಕ್ರಿಯೆಗಳನ್ನು ನಡೆಸಿ

ನಮೂನೆ-9 ಮತ್ತು 11ಎ ಗಳನ್ನು ನೀಡುವ ಮೂಲಕ ಕರ್ತವ್ಯ ನಿರ್ಲಕ್ಷತನ ತೋರಿಸಿರುವುದು ಕಂಡುಬರುತ್ತದೆ. ಮೇಲಿನಂತೆ **ದಿನಾಂಕ: 27-4-2017 ರಂದು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ 2ನೇ ಎದುರುದಾರರ ಯಾವುದೇ ರೀತಿಯ ಕರ್ತವ್ಯ ನಿರ್ಲಕ್ಷತನ ಕಂಡುಬರುವುದಿಲ್ಲ.**

17. ಮೇಲೆ ತಿಳಿಸಲಾದಂತೆ ಕಟ್ಟೇರಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಹೊಸಕನ್ನಮ್ಮಬಾಡಿ ಗ್ರಾಮದ ಖಾತೆ ಸಂ:18 ರ ಸ್ವತ್ತಿನ ಸಂ:152100601900300142 ರ ಇ-ಸ್ವತ್ತು ನಮೂನೆ-9 ಮತ್ತು 11ಎ ಗಳನ್ನು ನೀಡುವ ಬಗ್ಗೆ ಕೇವಲ ದಿ: 27-4-2017 ರ ಗ್ರಾಮ ಪಂಚಾಯತಿಯ ಮೇಲೆ ತಿಳಿಸಲಾದ ನಿರ್ಣಯದ ಆಧಾರದಿಂದ ಮತ್ತು ಸ್ವತ್ತು ಶ್ರೀ ರವಿಕುಮಾರ್ ಇವರಿಗೆ ಹೇಗೆ ಮತ್ತು ಯಾವ ದಾಖಲೆಯ ಮೂಲಕ ಬಂದಿದೆ ಎನ್ನುವುದನ್ನು ಪರಿಶೀಲಿಸದೇ ಸದರಿ ಸ್ವತ್ತಿಗೆ ಮೋಜಣಿ ಮಾಡಿಸುವ ಹಂತದಿಂದ ನಮೂನೆ-9 ಮತ್ತು 11ಎ ನೀಡುವ ಹಂತದವರೆಗೆ ಕಾನೂನುಬಾಹಿರ ಕೃತ್ಯ ಎಸಗಿ ಕರ್ತವ್ಯ ನಿರ್ಲಕ್ಷತನ ತೋರಿಸಿರುತ್ತಾರೆ.

18. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಪಾಂಡವಪುರ ತಾಲ್ಲೂಕಿನ ಕಟ್ಟೇರಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಹೊಸಕನ್ನಂಬಾಡಿ ಗ್ರಾಮದಲ್ಲಿ ದೂರುದಾರರ ಖಾತೆ ಸಂ:18/2 ರ ಮನೆಯ ದಕ್ಷಿಣ ದಿಕ್ಕಿಗಿರುವ ರಸ್ತೆಯ ಜಾಗಕ್ಕೆ ಸಂಬಂಧಿಸಿದಂತೆ ಖಾತೆ ಸಂ:18 ರಲ್ಲಿ ಪೂರ್ವ-ಪಶ್ಚಿಮ 41 ಅಡಿಗಳು ಮತ್ತು ಉತ್ತರ-ದಕ್ಷಿಣ 40 ಅಡಿಗಳು ಎಂದು ರಸ್ತೆಗೆ ಸಂಬಂಧಿಸಿದ ಜಾಗಕ್ಕೆ ಯಾವುದೇ ಕಾನೂನುಬದ್ಧ ಆಧಾರ ಇಲ್ಲದೇ ಶ್ರೀ ರವಿಕುಮಾರ ಇವರ ಹೆಸರಿಗೆ ಅನಧಿಕೃತವಾಗಿ ದಾಖಲಿಸಿರುವ ಖಾತೆಯನ್ನು ಮತ್ತು ನೀಡಿರುವ ನಮೂನೆ-9 ಮತ್ತು 11ಎ ಗಳನ್ನು ಕಾನೂನಿನ ಪ್ರಕಾರ ರದ್ದುಗೊಳಿಸಿ ಸದರಿ ಸ್ವತ್ತನ್ನು ಗ್ರಾಮ ಪಂಚಾಯತಿಯ ವಶಕ್ಕೆ ಪಡೆದುಕೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ

ಲೋಕಾಯುಕ್ತ ಕಾಯ್ದೆ–1984 ರ ಕಲಂ 12(1) ರಡಿಯಲ್ಲಿ ಕ್ರಮ ಕೈಗೊಳ್ಳುವಂತೆ, ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/3/22

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**